**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 92/2018**

| | | |
|---|---|---|
| ಸಾಕ್ಷಿಯ ಹೆಸರುಃ | ರುಕ್ಕಿಬಾಯಿ | ಫ್ರಾಸಾಃ 1 |
| ತಂದೆ/ಗಂಡನ ಹೆಸರುಃ | ದೇವಜಿ | ಚಾಸಾಃ 1 |
| ವಯಸ್ಸು ಃ | 30 ವರ್ಷ | ದಿಃ 17-05-2023 |
| ಉದ್ಯೋಗಃ | ಕೂಲಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಮುದ್ನಾಳ ಉಮಲಾ ನಾಯಕ ತಾಂಡಾ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನನಗೆ ಚಾಸಾಃ 4 ರಿಂದ 6 ರವರ ಪರಿಚಯವಿದೆ. ನನಗೆ ಆರೋಪಿತರನ ಪರಿಚಯವಿದೆ. ಸುಮಾರು 5 ವರ್ಷದ ಹಿಂದೆ ನಾನು ಮತ್ತು ಚಾಸಾಃ 4 ರವರು ಇಬ್ಬರೂ ಮುಂಜಾನೆ 7-00 ಗಂಟೆ ಸುಮಾರಿಗೆ ನಮ್ಮ ಮನೆಯಲ್ಲಿದ್ದೇವು ಆ ಸಮಯದಲ್ಲಿ ಆರೋಪಿತನು ಕೊಡಲಿ ತೆಗೆದುಕೊಂಡು ಬಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಸದರಿ ಆರೋಪಿತನು ನಮ್ಮ ಮನೆಯ ಬಾಗಿಲನ್ನು ಕೊಡಲಿಯಿಂದ ಹೊಡೆದಿರುತ್ತಾನೆ. ಆದ್ದರಿಂದ ನಮಗೆ 10,000/- ರೂಪಾಯಿಯಷ್ಟು ನಷ್ಟವಾಗಿರುತ್ತದೆ. ನಂತರ ಆರೋಪಿತನು ಚಾಸಾಃ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಮತ್ತು ಕಾಲಿನಿಂದ ಹೊಡೆದಿರುತ್ತಾನೆ. ನಂತರ ನನಗೆ ಆರೋಪಿತನು ಬೊಸಡಿ, ರಂಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು, ನನ್ನ ದುಪ್ಪಟ್ಟ ಮತ್ತು ಲಂಗವನ್ನು ಹಿಡಿದು ಎಳೆದು ಅವಮಾನ ಮಾಡಿರುತ್ತಾನೆ. ನಂತರ ಚಾಸಾಃ 5 ಮತ್ತು ಚಾಸಾಃ 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಂತರ ಅದೇ ದಿನ ಆರೋಪಿತನ ವಿರುದ್ದ ಪ್ರಕರಣವನ್ನು ದಾಖಲಿಸಿರುತ್ತೇವೆ. ನಂತರ ಪೋಲಿಸರು ಘಟನಾ ಸ್ಥಳಕ್ಕೆ ಮುಂಜಾನೆ 11-00 ಗಂಟೆಗೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಘಟನಾ ಸ್ಥಳದಲ್ಲಿರುವ ಕೊಡಲಿಯನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ಸದರಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿರುತ್ತಾರೆ. ಸಾಕ್ಷಿಗೆ ಒಂದು ಕೊಡಲಿಯನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ನುಡಿದಿದ್ದರಿಂದ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಪಾಟಿ ಸವಾಲಿಗಾಗಿ ಅನುಮತಿ ಕೋರಿದ್ದು ನ್ಯಾಯಾಲಯದ ಮುಂದೆ ಇರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು.)**

ಆರೋಪಿತನು ನಮಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಜಿ. ಬಿ. ಎನ್. ಇವರಿಂದ**

ಚಾಸಾಃ 4 ನನ್ನ ಖಾಸಾ ತಮ್ಮ ಎಂದರೆ ಸರಿ. ಚಾಸಾಃ 5 ಮತ್ತು 6 ನನಗೆ ಅಣ್ಣ-ತಮ್ಮಂದಿರಾಗಬೇಕು. ಸದರಿ ಚಾಸಾಃ 6 ರವರು ಜಗಳದ ಸಂದರ್ಭದಲ್ಲಿ ಮುಂಬೈಯಲ್ಲಿ ಇದ್ದ ಎಂದರೆ ಸರಿಯಲ್ಲ. ಸದರಿ ಚಾಸಾಃ 2 ಮತ್ತು 3 ರವರು ನನ್ನ ಅಣ್ಣ-ತಮ್ಮಂದಿರು ಎಂದರೆ ಸರಿ. ಸದರಿ ಚಾಸಾಃ 2 ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಚಾಸಾಃ 2 ರವರು ಜಗಳವಾದ ಸಂದರ್ಭದಲ್ಲಿ ಮುಂಬೈಯಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತನು ನಮ್ಮ ಅಣ್ಣ-ತಮ್ಮಂದಿರು ಎಂದರೆ ಸರಿಯಲ್ಲ. ಸದರಿ ಆರೋಪಿತನ ಮತ್ತು ನಮ್ಮ ಮನೆಯ ನಡುವೆ 2-3 ಕಿ.ಮಿ. ಅಂತರವಿದೆ. ಸದರಿ ಚಾಸಾಃ 4 ಮತ್ತು ಆರೋಪಿತನ ನಡುವೆ ಒಳ್ಳೆಯ ಸಂಬಂಧವಿಲ್ಲ ಎಂದರೆ ಸರಿ. ಚಾಸಾಃ 4 ಮತ್ತು ಆರೋಪಿತನು ಮಾತನಾಡುವುದಿಲ್ಲ ಎಂದರೆ ಸಾಕ್ಷಿಯು ಮೊದಲು ಮಾತನಾಡುತ್ತಿದ್ದರು, ಈಗ ಜಗಳವಾದ ನಂತರ ಮಾತನಾಡುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಗಳವು ಯಾವ ದಿನಾಂಕದಂದು ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ 5 ವರ್ಷದ ಹಿಂದೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾಃ 4 ರವರು ಆರೋಪಿತನ ಹೆಂಡತಿಯನ್ನು ಚುಡಾಯಿಸುವುದು ಮತ್ತು ಮಾತನಾಡಿಸುವುದು ಮಾಡುತ್ತಿದ್ದ ಎಂದರೆ ಸರಿಯಲ್ಲ. ಸದರಿ ಚಾಸಾಃ 4 ರವರು ಆರೋಪಿತನ ಹೆಂಡತಿಯ ಜೊತೆ ಮಾತನಾಡುವುದು, ಚುಡಾಯಿಸುವುದು ಮಾಡುತ್ತಿದ್ದರೂ ಚಾಸಾಃ 4 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಾಸಾಃ 4 ರವರು ಆರೋಪಿತನ ಹೆಂಡತಿಯ ಜೊತೆ ಸಲುಗೆಯಿಂದ ಮಾತನಾಡುತ್ತಿದ್ದ ಎಂದರೆ ಸರಿಯಲ್ಲ. ಸದರಿ ಚಾಸಾಃ 4 ರವರು ಆರೋಪಿತನ ಹೆಂಡತಿಯ ಜೊತೆ ಸಲುಗೆಯಿಂದ ಮಾತನಾಡುತ್ತಿದ್ದರೂ ಚಾಸಾಃ 4 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಪಿ-1

ರಲ್ಲಿ ಈ ಹಿಂದೆ ನನ್ನ ಹೆಂಡತಿಯ ಜೊತೆ ಸಲುಗೆಯಿಂದ ಮಾತನಾಡಿದ್ದೆ ಎಂದು ಬರೆಸಿರುತ್ತೀಯಾ? ಎಂದರೆ ನಾನು ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮದುವೆ ಆಗಿರುವುದಿಲ್ಲ ಎಂದರೆ ಸರಿ. ನಾನು ಮತ್ತು ಚಾಸಾಃ 4 ರವರು ಆರೋಪಿತನು ಬಂದಾಗ ಮನೆಯ ಮುಂದೆ ಇದ್ದೇವು. ಸದರಿ ಆರೋಪಿತನು ನಮಗೆ ಅವಾಚ್ಯ ಶಬ್ದಗಳಲ್ಲಿ ಬೈದಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ಮನೆಯ ಬಾಗಿಲು ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಮು. ಮಾ. 1 ರೈತರ ಮನೆಯಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. ಸದರಿ ಮು. ಮಾ. 1 ಂ ರೈತರ ಮನೆಯಲ್ಲಿ ಸಿಗುತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಗಿಲು ಹೊಡೆದಿರುವ ಬಗ್ಗೆ ಪೋಲಿಸರು ಪಂಚನಾಮೆಯನ್ನು ಮಾಡಿರುವುದಿಲ್ಲ. ಸದರಿ ಬಾಗಿಲು ಮುರಿದಕ್ಕಾಗಿ ರೂ. 10,000/- ನಷ್ಟವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಗಿಲು ನಷ್ಟ ಆಗಿರುವುದಿಲ್ಲ ಆದ್ದರಿಂದ ಪೋಲಿಸರು ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೋಲಿಸರು ಬಾಗಿಲ ಬಗ್ಗೆ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಾಗಿಲು ಮುರಿದ ಬಗ್ಗೆ ಪಂಚನಾಮೆ ಮಾಡುತ್ತಿದ್ದರೆ ಪೋಲಿಸರು ಅದರ ಬಗ್ಗೆ ಮಾಹಿತಿ ಪಂಚನಾಮೆಯಲ್ಲಿ ಬರೆಯುತ್ತಿದ್ದರು ಎಂದರೆ ಸಾಕ್ಷಿಯು ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನನಗೆ ಪ್ರಕರಣದ ಬಗ್ಗೆ ಯವುದೇ ಮಾಹಿತಿ ಇಲ್ಲದಿದ್ದರೂ ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ಚಾಸಾಃ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾಃ 4 ರವರಿಗೆ ಕೈಯಿಂದ , ಕಾಲಿನಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಾಸಾಃ 4 ರವರಿಗೆ ಆರೋಪಿತನು ಹೊಡೆದ ಪರಿಣಾಮವಾಗಿ ತಲೆಗೆ ಪೆಟ್ಟಾಗಿರುತ್ತದೆ. ಸದರಿ ಚಾಸಾಃ 4 ರವರಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ಚಾಸಾಃ 4 ರವರಿಗೆ ಸೊಲ್ಲಾಪೂರ ಮತ್ತು ಗುಲ್ಬರ್ಗಾದಲ್ಲಿರುವ ಆಸ್ಪತ್ರೆಯಲ್ಲಿ ತೋರಿಸಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಆಸ್ಪತ್ರೆಯ ಹೆಸರನ್ನು ನಿಖರವಾಗಿ ಹೇಳಿರುವುದಿಲ್ಲ. ನಾವು ಚಾಸಾಃ 4 ರವರನ್ನು ಗುಲ್ಬರ್ಗಾ ಆಸ್ಪತ್ರೆಗೆ ತೋರಿಸಿರುತ್ತೇವೆ. ಚಾಸಾಃ 4 ರವರಿಗೆ ಗುಲ್ಬರ್ಗಾ, ಸೊಲ್ಲಾಪೂರ ಆಸ್ಪತ್ರೆಗಳಲ್ಲಿ ತೋರಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ನನಗೆ ಅವಾಚ್ಯ ಶಬ್ದಗಳಲ್ಲಿ

ಬೈದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನನ್ನ ದುಪ್ಪಟ್ಟಿ ಮತ್ತು ಲಂಗವನ್ನು ಹಿಡಿದು ಎಳೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ನನಗೆ ಮಾನಭಂಗ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾಃ 4 ಮತ್ತು ಆರೋಪಿತನ ನಡುವೆ ವೈಶಮ್ಯತೆ ಇರುವುದರಿಂದ ಚಾಸಾಃ 4 ರವರ ಮಾತು ಕೇಳಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಜಗಳವಾಗುವುದಕ್ಕಿಂತ ಮುಂಚೆ ನಮ್ಮ ಮತ್ತು ಆರೋಪಿತನ ನಡುವೆ ತಾಂಡಾದಲ್ಲಿ ನ್ಯಾಯಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಾಂಡಾದಲ್ಲಿ ನ್ಯಾಯಪಂಚಾಯಿತಿಯಲ್ಲಿ ಚಾಸಾಃ 4 ರವರಿಗೆ ಆರೋಪಿತನ ಹೆಂಡತಿಯನ್ನು ಚುಡಾಯಿಸಬೇಡ, ಮಾತನಾಡಬೇಡ ಎಂದು ಬುದ್ದಿ ಮಾತು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಚಾಸಾಃ 4 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವನ್ನು ಚಾಸಾಃ 5 ಮತ್ತು ಚಾಸಾಃ 6 ರವರು ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿ ಸ್ಥಳದಲ್ಲೇ ಮು. ಮಾ. 1 ನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನಮಗೆ ಜೀವ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 92/2018**

| | | |
|---|---|---|
| ಸಾಕ್ಷಿಯ ಹೆಸರುಃ | ಸೋಮು | ಪ್ರಾಸಾಃ 2 |
| ತಂದೆ/ಗಂಡನ ಹೆಸರುಃ | ದೇವಜಿ | ಚಾಸಾಃ 4 |
| ವಯಸ್ಸು ಃ | 29 ವರ್ಷ | ದಿಃ 17-05-2023 |
| ಉದ್ಯೋಗಃ | ಕೂಲಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಮುದ್ನಾಳ ಉಮಲಾ ನಾಯಕ ತಾಂಡಾ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ಚಾಸಾಃ 1 ರವರು ನನ್ನ ಸಹೋದರಿ ಆಗಬೇಕು. ಆರೋಪಿತನು ನಮ್ಮ ತಾಂಡಾದವರು ಆದರೆ ನನಗೆ ಪರಿಚಯವಿಲ್ಲ. ಚಾಸಾಃ 5 ಮತ್ತು ಚಾಸಾಃ 6 ರವರ ಪರಿಚಯವಿದೆ. ಸುಮಾರು 5 ವರ್ಷದ ಹಿಂದೆ ದಿನಾಂಕಃ 19-10-2017 ರಂದು ಬೆಳಿಗ್ಗೆ 7-00 ಗಂಟೆ ಸುಮಾರಿಗೆ ನಾನು ಮತ್ತು ಚಾಸಾಃ 1 ರವರು ಮನೆಯಲ್ಲಿದ್ದೇವು. ಆ ಸಂದರ್ಭದಲ್ಲಿ ಆರೋಪಿತನು ಕೈಯಲ್ಲಿ ಕೊಡಲಿ ಹಿಡಿದುಕೊಂಡು ನನಗೆ ನನ್ನ ಹೆಂಡತಿಯ ಜೊತೆ ಸಲುಗೆಯಿಂದ ಮಾತನಾಡಿದ್ದೀಯಾ ಎಂದು ಹೊಡೆಯಲು ಬಂದಿರುತ್ತಾನೆ. ಆವಾಗ ನಾನು ಮತ್ತು ಚಾಸಾಃ 1 ರವರು ಮನೆಯ ಮುಂದೆ ಇರುವಾಗ ನಾವು ಭಯವಾಗಿ ಮನೆಯಲ್ಲಿ ಹೋಗಿರುತ್ತೇವೆ. ಆಗ ಬಾಗಿಲು ಬಂದ ಮಾಡಿದಾಗ ಆರೋಪಿತನು ಕೊಡಲಿಯಿಂದ ಬಾಗಿಲಿಗೆ ಹೊಡೆದಿರುತ್ತಾನೆ. ಆದ್ದರಿಂದ ನಮಗೆ ರೂ. 10,000/- ನಷ್ಟವಾಗಿರುತ್ತದೆ. ಆಗ ನಾವು ಮನೆಯಿಂದ ಹೊರಗೆ ಬಂದಾಗ ನನಗೆ ಅಂಗಿ ಹಿಡಿದು ಕೈಯಿಂದ ಕಾಪಾಳಕ್ಕೆ ಹೊಡೆದು, ಕಾಲಿನಿಂದ ಒದ್ದಿರುತ್ತಾನೆ. ಆ ಸಂದರ್ಭದಲ್ಲಿ ಚಾಸಾಃ 1 ರವರು ಜಗಳ ಬಿಡಿಸಲು ಬಂದಾಗ ಆರೋಪಿತನು ದುಪ್ಪಟ್ಟಾ ಮತ್ತು ಲಂಗ ಹಿಡಿದು ಎಳೆದು ಮಾನಭಂಗ ಮಾಡಲು ಪ್ರಯತ್ನಪಟ್ಟಿರುತ್ತಾನೆ. ಆ ಸಂದರ್ಭದಲ್ಲಿ ಚಾಸಾಃ 5 ಮತ್ತು ಚಾಸಾಃ 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಆರೋಪಿತನು ನಮಗೆ ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ. ಸಾಕ್ಷಿಯು ಕೊಡಲಿಯನ್ನು ನೋಡಿ ಗುರುತಿಸಿರುತ್ತಾನೆ. ಅದನ್ನು ಈಗಾಗಲೇ ಮು. ಮಾ. 1 ಎಂದು ಗುರುತಿಸಲಾಗಿದೆ. ನಾನು ಮತ್ತು ಚಾಸಾಃ 1 ರವರು ಯಾದಗಿರಿ (ಗ್ರಾ) ಪೋಲಿಸ

ಠಾಣೆಗೆ ಹೋಗಿ ಆರೋಪಿತನ ವಿರುದ್ದ ಪ್ರಕರಣವನ್ನು ದಾಖಲಿಸಿರುತ್ತೇವೆ. ಅದೇ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿ ಮು. ಮಾ. 1 ನ್ನು ಜಪ್ತಿಪಡಿಸಿಕೊಂಡಿರುತ್ತಾರೆ.

**ಪಾಟಿ ಸವಾಲು ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**